# ಪತ್ರಿಕಾ ಪ್ರಕಟಣೆ

## 1)ಯಾದಗಿರಿ ನಗರ ಪೊಲೀಸ್ ಠಾಣೆ ಗುನ್ನೆ ನಂ:11/2022 ಕಲಂ: 392 ಐ.ಪಿ.ಸಿ.

ದಿನಾಂಕ:14/01/2022 ರಂದು ರಾತ್ರಿ 9:15 ಗಂಟೆಯ ಸುಮಾರಿಗೆ ಯಾದಗಿರಿ ನಗರದ ಗಂಜ್ ಕ್ರಾಸ್ ಹತ್ತಿರ ಇರುವ ಹೊನ್ನಯ್ಯ ತಾತಾ ದೇವಸ್ಥಾನದ ಹತ್ತಿರ ಯಾರೋ ಒಬ್ಬ ಕಳ್ಳನು ಫಿರ್ಯಾದಿ ಅನಿಲಕುಮಾರ ತಂದೆ ಭೀಮರಾಯ ನಾಯಕ ಸಾ॥ಹಿರೇಅಗಸಿ ಯಾದಗಿರಿ ಈತನ ಮೇಲೆ ಖಾರದಪುಡಿ ಎರಚಿ ಅನಿಲಕುಮಾರ ರವರ ಮೋಟರ್ ಸೈಕಲ್ ಟ್ಯಾಂಕ್ ಕವರಿನಲ್ಲಿದ್ದ ರೂ.44800/- ಹಣವನ್ನು ದೋಚಿಕೊಂಡು ಹೋದ ಬಗ್ಗೆ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ:15/01/2022 ರಂದು ಪ್ರಕರಣ ದಾಖಲಾಗಿರುತ್ತದೆ.

ಯಾದಗಿರಿ ವೃತ್ತ ವ್ಯಾಪ್ತಿಯಲ್ಲಿ ದಾಖಲಾದ ಸ್ವತ್ತಿನ ಪ್ರಕರಣಗಳ ಪತ್ತೆಗಾಗಿ ಮಾನ್ಯ ಎಸ್.ಪಿ.ಸಾಹೇಬರು ಯಾದಗಿರಿ ಜಿಲ್ಲೆ ಮತ್ತು ಶ್ರೀ.ಸಂತೋಷ ಬನ್ನಟ್ಟಿ ಮಾನ್ಯ ಡಿವೈ.ಎಸ್.ಪಿ ಯಾದಗಿರಿ ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ.ದೀಪಕ್ ಆರ್.ಭೂಸರೆಡ್ಡಿ ಸಿ.ಪಿ.ಐ. ಯಾದಗಿರಿ, ಯಾದಗಿರಿ ನಗರ ಪೊಲೀಸ್ ಠಾಣೆಯ ಶ್ರೀ.ವೀರಣ್ಣ ಪಿ.ಎಸ್.ಐ ಹಾಗು ಗಣಪತಿ ಹೆಚ್.ಸಿ-31, ಗಜೇಂದ್ರ ಹೆಚ್.ಸಿ-123, ಶಿವಶಂಕರ ಹೆಚ್.ಸಿ-175, ಮೋನಪ್ಪ ಹೆಚ್.ಸಿ. ಹರಿನಾಥರೆಡ್ಡಿ ಪಿ.ಸಿ.-267 ದಾವಲಸಾಬ ಪಿ.ಸಿ-268 ರವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದ್ದು, ಸದರಿ ತಂಡದ ಅಧಿಕಾರಿ ಮತ್ತು ಸಿಬ್ಬಂದಿಯವರು ಆರೋಪಿತನ ಬಗ್ಗೆ ಸಮಗ್ರ ಮಾಹಿತಿಯನ್ನು ಕಲೆಹಾಕಿ ಆರೋಪಿ ದಿಲೀಪ್ ಭಾರ್ತಿ ತಂದೆ ಜೋಗಾ ಭಾರ್ತಿ, ವಯ:26 ವರ್ಷ, ಜಾತಿ:ಸ್ವಾಮಿ, ಉ॥ಕೂಲಿ, ಸಾ॥ಸಮದಾರಿ ಮಾರ್ಗ, ಸೇವಲಿ, ತಾ॥ಸಿವಾನಾ, ಜಿ॥ಬರ್ಮೇರ್, ರಾಜಸ್ಥಾನ ರಾಜ್ಯ ಈತನಿಗೆ ದಿನಾಂಕ:15/01/2022 ರಂದೇ ಪ್ರಕರಣ ವರದಿಯಾದ ಕೇವಲ 7 ಗಂಟೆಗಳಲ್ಲಿ ಪತ್ತೆಮಾಡಿದ್ದು, ಆರೋಪಿತನಿಂದ ರೂ.44800/- ಹಣವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

## 2) ಯಾದಗಿರಿ ನಗರ ಪೊಲೀಸ್ ಠಾಣೆ ಗುನ್ನೆ ನಂ:04/2022 ಕಲಂ: 379 ಐ.ಪಿ.ಸಿ.

ದಿನಾಂಕ:30/12/2021 ರ ರಾತ್ರಿ ವೇಳೆಯಲ್ಲಿ ಹೊಸಳ್ಳಿ ಕ್ರಾಸ್ ಹತ್ತಿರ ಇರುವ ಫಿರ್ಯಾದಿ ಶ್ರೀ.ಚಂದ್ರಶೇಖರ ತಂದೆ ಭೋಜಪ್ಪ ಮಗ್ಗಾ ಇವರ ಮನೆಯ ಮುಂದೆ ಕಟ್ಟಿ ಹಾಕಿದ ಅ.ಕಿ.ರೂ.70000/- ಕಿಮ್ಮತ್ತಿನ 4 ದನಗಳನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋದ ಬಗ್ಗೆ ದೂರು ಕೊಟ್ಟಿರುತ್ತಾರೆ.

ಯಾದಗಿರಿ ವೃತ್ತ ವ್ಯಾಪ್ತಿಯಲ್ಲಿ ದಾಖಲಾದ ಸ್ವತ್ತಿನ ಪ್ರಕರಣಗಳ ಪತ್ತೆಗಾಗಿ ಮಾನ್ಯ ಎಸ್.ಪಿ.ಸಾಹೇಬರು ಯಾದಗಿರಿ ಜಿಲ್ಲೆ ಮತ್ತು ಶ್ರೀ.ವೀರೇಶ ಕರಡಿಗುಡ್ಡ ಮಾನ್ಯ ಡಿವೈ.ಎಸ್.ಪಿ ಯಾದಗಿರಿ ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ.ದೀಪಕ್ ಆರ್.ಭೂಸರೆಡ್ಡಿ ಸಿ.ಪಿ.ಐ. ಯಾದಗಿರಿ, ಯಾದಗಿರಿ ನಗರ ಪೊಲೀಸ್ ಠಾಣೆಯ ಶ್ರೀ.ವೀರಣ್ಣ ಪಿ.ಎಸ್.ಐ ಹಾಗು ಗಣಪತಿ ಹೆಚ್.ಸಿ-31, ಗಜೇಂದ್ರ ಹೆಚ್.ಸಿ-123, ಶಿವಶಂಕರ ಹೆಚ್.ಸಿ-175, ಮೋನಪ್ಪ ಹೆಚ್.ಸಿ. ಹರಿನಾಥರೆಡ್ಡಿ ಪಿ.ಸಿ.-267 ದಾವಲಸಾಬ ಪಿ.ಸಿ-268 ರವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದ್ದು, ಸದರಿ ತಂಡದ ಅಧಿಕಾರಿ ಮತ್ತು ಸಿಬ್ಬಂದಿಯವರು ಆರೋಪಿತರ ಬಗ್ಗೆ ಸಮಗ್ರ ಮಾಹಿತಿಯನ್ನು ಕಲೆಹಾಕಿ ದಿನಾಂಕ:25/01/2022 ರಂದು ದನಗಳನ್ನು ಸಾಗಾಣಿಕೆ ಮಾಡುತ್ತಿದ್ದ ಅಶೋಕ್ ಲೇಲ್ಯಾಂಡ್ ದೋಸ್ತ್ ವಾಹನ ನಂ:ಕೆಎ-33 ಎ-8714 ನೇದ್ದನ್ನು ವಶಪಡಿಸಿಕೊಂಡು ಆರೋಪಿತರಾದ 1)ಸೈಯದ್ ಚಾಂದ್ ತಂದೆ ಸೈಯದ್ ಅಬೀದ್ ವಯಾ 22 ವರ್ಷ, ಜಾ॥ ಮುಸ್ಲಿಂ ಉ॥ ಚಾಲಕ ಸಾ॥ ಡೆಕ್ಕನ್ ಕಾಲೇಜ್ ಹತ್ತಿರ ಹಾಗರಗ ರೋಡ ಕಲಬುರಗಿ ಮತ್ತು 2] ಜಾಫರ್ ತಂದೆ ಅಬ್ದುಲ್ ಘನಿ ವಯಾ 21 ವರ್ಷ, ಜಾ॥ ಮುಸ್ಲಿಂ ಉ॥ ಕೂಲಿ ಕೆಲಸ ಸಾ॥ ಮಿಜಗುರಿ ತರಕಾರಿ ಮಾರ್ಕೆಟ್ ಹತ್ತಿರ ದರ್ಗಾ ರೋಡ ಕಲಬುರಗಿ ಇವರನ್ನು ದಸ್ತಗಿರಿಮಾಡಿ ಅವರಿಂದ ಈ ಪ್ರಕರಣದಲ್ಲಿ ಕಳ್ಳತನ ಮಾಡಿ ಮಾರಾಟ ಮಾಡಿದ 4 ದನಗಳ ರೂ.60000/- ಹಣವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

## 3) ಯಾದಗಿರಿ ನಗರ ಪೊಲೀಸ್ ಠಾಣೆ ಗುನ್ನೆ ನಂ:20/2022 ಕಲಂ: 379 ಐ.ಪಿ.ಸಿ.

ದಿನಾಂಕ 04/02/2022 ರಂದು ಮಧ್ಯಾಹ್ನ 01-00 ಗಂಟೆಯ ಸುಮಾರಿಗೆ ಫಿರ್ಯಾದಿ ಶ್ರೀಮತಿ.ಮಂಜುಳಾ ಗಂಡ ಪ್ರಕಾಶಸ್ವಾಮಿ ಚಿಕ್ಕಮಠ, ಸಾ:ಗುತ್ತಿಪೇಠ ಶಹಾಪೂರ ಇವರು ತನ್ನ ಮಗ ಶಿವಶರಣಪ್ಪನೊಂದಿಗೆ ಯರಗೋಳ ಗ್ರಾಮಕ್ಕೆ ಹೋಗಲು ಯಾದಗಿರಿ ನಗರದ ಹೊಸಾ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ತನ್ನ ವೆನಿಟಿ ಬ್ಯಾಗದಲ್ಲಿ ಇದ್ದ ಅ.ಕಿ.ರೂ.337500/- ಬೆಲೆಯ 7.5 ತೊಲೆಯ ಬಂಗಾರದ ಆಭರಣಗಳನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಅಂತಾ ದೂರು ಕೊಟ್ಟಿರುತ್ತಾರೆ.

ಯಾದಗಿರಿ ವೃತ್ತ ವ್ಯಾಪ್ತಿಯಲ್ಲಿ ದಾಖಲಾದ ಸ್ವತ್ತಿನ ಪ್ರಕರಣಗಳ ಪತ್ತೆಗಾಗಿ ಮಾನ್ಯ ಎಸ್.ಪಿ.ಸಾಹೇಬರು ಯಾದಗಿರಿ ಜಿಲ್ಲೆ ಮತ್ತು ಶ್ರೀ.ವೀರೇಶ ಕರಡಿಗುಡ್ಡ ಮಾನ್ಯ ಡಿವೈ.ಎಸ್.ಪಿ ಯಾದಗಿರಿ ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ.ದೀಪಕ್ ಆರ್.ಭೂಸರೆಡ್ಡಿ ಸಿ.ಪಿ.ಐ. ಯಾದಗಿರಿ, ಯಾದಗಿರಿ ನಗರ ಪೊಲೀಸ್ ಠಾಣೆಯ ಶ್ರೀ.ವೀರಣ್ಣ ಪಿ.ಎಸ್.ಐ ಹಾಗು ಗಣಪತಿ ಹೆಚ್.ಸಿ-31, ಗಜೇಂದ್ರ ಹೆಚ್.ಸಿ-123, ಶಿವಶಂಕರ ಹೆಚ್.ಸಿ-175, ಮೋನಪ್ಪ ಹೆಚ್.ಸಿ. ಹರಿನಾಥರೆಡ್ಡಿ ಪಿ.ಸಿ.-267 ದಾವಲಸಾಬ ಪಿ.ಸಿ-268, ಆರತಿ ಡಬ್ಲು.ಪಿ.ಸಿ-63, ಸುಮತಿ ಡಬ್ಲು.ಪಿ.ಸಿ-421, ಶಾಂತಾ ಡಬ್ಲು.ಪಿ.ಸಿ-138 ರವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದ್ದು, ಸದರಿ ತಂಡದ ಅಧಿಕಾರಿ ಮತ್ತು ಸಿಬ್ಬಂದಿಯವರು ಆರೋಪಿತರ ಬಗ್ಗೆ ಸಮಗ್ರ ಮಾಹಿತಿಯನ್ನು ಕಲೆಹಾಕಿ ಆರೋಪಿತರಾದ 1)ಜಯಾ ಗಂಡ ಅಜಯ ಸಕಟ್, ವಯ:30 ವರ್ಷ, ಜಾತಿ:ಬುಡಬುಡಕಿ, 2)ಚಿಮ್ಮನ್ ಗಂಡ ಅನಿಲ್ ಕಾಂಬಳೆ, ವಯ:50 ವರ್ಷ, ಜಾತಿ:ಬುಡಬುಡಕಿ, 3)ರೇಣುಕಾ ಗಂಡ ಬಾದಲ್ ಕಾಳೆ, ವಯ:55 ವರ್ಷ, ಜಾತಿ:ಬುಡಬುಡಕಿ ಎಲ್ಲರು ಸಾ॥ಕಡಕಿ, ಪುಣೆ ಮಹಾರಾಷ್ಟ್ರ, ಹಾ॥ವ॥ಯಶ್ವಂತಪೂರ ರೈಲ್ವೇ ನಿಲ್ದಾಣದ ಹತ್ತಿರ ಬೆಂಗಳೂರು ಇವರನ್ನು ಪತ್ತೆಮಾಡಿ ಸದರಿಯವರಿಂದ ಅ.ಕಿ.ರೂ.337500/- ಬೆಲೆಯ 7.5 ತೊಲೆಯ ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.

ಮೇಲ್ಕಂಡ 3 ಪ್ರಕರಣಗಳನ್ನು ಪತ್ತೆ ಮಾಡಿದ ತಂಡಕ್ಕೆ ಮಾನ್ಯ ಎಸ್.ಪಿ ಯಾದಗಿರಿ ರವರು ಪ್ರಸಂಶನೆ ವ್ಯಕ್ತಪಡಿಸಿರುತ್ತಾರೆ.

ಸಹಿ/-
ಆರಕ್ಷಕ ಅಧೀಕ್ಷಕರು
ಯಾದಗಿರಿ